**D**

**CCE PR**
**UNREVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2019**

**S.S.L.C. EXAMINATION, MARCH / APRIL, 2019**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 04. 04. 2019 ] **ಸಂಕೇತ ಸಂಖ್ಯೆ : 62-K**

Date : 04. 04. 2019 ] **CODE NO. : 62-K**

## ವಿಷಯ : ತೃತೀಯ ಭಾಷೆ — ಕನ್ನಡ

## Subject : Third Language — KANNADA

**(ಹಳೆ ಪಠ್ಯಕ್ರಮ / Old Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'**<br>**(ಗದ್ಯ, ಪದ್ಯ, ಪೋಷಕ ಅಧ್ಯಯನ)**<br>**ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ವಾಕ್ಯ ರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | 16 × 1 = 16 |
| 1. | ಕವಿ ಜಿ.ಪಿ. ರಾಜರತ್ನಂ ಅವರು ಗುರುತಿಸಿರುವಂತೆ ಕನ್ನಡಿಗರ ಒಂದು ಒಳ್ಳೆಯ ಗುಣವನ್ನು ತಿಳಿಸಿರಿ.<br>***ಉತ್ತರ :***<br>ಜಿ.ಪಿ. ರಾಜರತ್ನಂ ಅವರ ಅಭಿಪ್ರಾಯದಂತೆ ಕನ್ನಡಿಗರಲ್ಲಿರುವ ಒಳ್ಳೆಯ ಗುಣವೆಂದರೆ ಅಭಿಮಾನ / ಸುತ್ತಲಿನ ಜನರೊಡನೆ ಹೊಂದಿಕೊಳ್ಳುವ ಸ್ವಭಾವ / ನಿರ್ಮತ್ಸರ / ಭಾಷಾ ಸಾಮರಸ್ಯ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | ತನ್ನ ಕಾಲದ ಕನ್ನಡ ರಾಜ್ಯವನ್ನು ವರ್ಣಿಸಿದ ದೊರೆ ಯಾರು ?<br>***ಉತ್ತರ :***<br>ತನ್ನ ಕಾಲದ ಕನ್ನಡ ರಾಜ್ಯವನ್ನು ವರ್ಣಿಸಿದ ರಾಜ ನೃಪತುಂಗ ಚಕ್ರವರ್ತಿ. | |
| 3. | ಅನಿಲ್ ಕುಂಬ್ಳೆ ಅವರ ಪ್ರೌಢಶಾಲಾ ವಿದ್ಯಾಭ್ಯಾಸ ಎಲ್ಲಿ ನಡೆಯಿತು ?<br>***ಉತ್ತರ :***<br>ಅನಿಲ್ ಕುಂಬ್ಳೆ ಅವರ ಪ್ರೌಢಶಾಲಾ ವಿದ್ಯಾಭ್ಯಾಸವು ಬೆಂಗಳೂರಿನ ನ್ಯಾಷನಲ್ ಹೈಸ್ಕೂಲಿನಲ್ಲಿ ನಡೆಯಿತು. | |
| 4. | ಸತ್ಯಾಗ್ರಹಿಗಳನ್ನು ಚದುರಿಸಲು ಕುಲಕರ್ಣಿ ಅವರು ಯಾವ ತೀರ್ಮಾನ ತೆಗೆದುಕೊಂಡರು ?<br>***ಉತ್ತರ :***<br>ಸತ್ಯಾಗ್ರಹಿಗಳನ್ನು ಚದುರಿಸಲು ಕುಲಕರ್ಣಿ ಅವರು ಗಾಳಿಯಲ್ಲಿ ಗುಂಡು ಹಾರಿಸುವ ತೀರ್ಮಾನ ತೆಗೆದುಕೊಂಡರು. | |
| 5. | ಕಿತ್ತೂರಿನ ಚೆನ್ನಮ್ಮ ಯಾರ ವಿರುದ್ಧ ಹೋರಾಡಿದಳು ?<br>***ಉತ್ತರ :***<br>ಕಿತ್ತೂರಿನ ಚೆನ್ನಮ್ಮ ಬ್ರಿಟಿಷರ ವಿರುದ್ಧ ಹೋರಾಡಿದಳು. | |
| 6. | ರಾಣಿ ಚೆನ್ನಮ್ಮ ತನ್ನ ವೀರರನ್ನು ಏನೆಂದು ಹುರಿದುಂಬಿಸಿದಳು ?<br>***ಉತ್ತರ :***<br>"ನಿಮ್ಮ ಧಮನಿ–ಧಮನಿಗಳಲ್ಲಿ ರಕ್ತದ ಕಣಗಳಿರುವವರೆವಿಗೂ ವೀರರಾಗಿ ಹೋರಾಡಿ" ಎಂದು ಕಿತ್ತೂರ ಚೆನ್ನಮ್ಮ ವೀರರನ್ನು ಹುರಿದುಂಬಿಸಿದಳು. | |
| 7. | ನಾ. ಕಸ್ತೂರಿ ಅವರದು ಯಾವ ಯಾವ ಕ್ಷೇತ್ರಗಳಲ್ಲಿ ಮರೆಯಲಾರದ ಹೆಸರು ?<br>***ಉತ್ತರ :***<br>ನಾ. ಕಸ್ತೂರಿ ಅವರದು ಲಲಿತ ಪ್ರಬಂಧಗಳು ಮತ್ತು ಸ್ವಚ್ಛಂದ ಹರಟೆಗಳ ಕ್ಷೇತ್ರಗಳಲ್ಲಿ ಮರೆಯಲಾರದ ಹೆಸರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 8. | ಕೋಗಿಲೆಯ ಕಂಠ ಹೇಗಿದೆ ?<br>*ಉತ್ತರ :*<br>ಕೋಗಿಲೆಯ ಕಂಠ ಮಧುರವಾಗಿದೆ. | |
| 9. | 'ನಾವು ಯಾವ ಪಣವನ್ನು ತೊಡಬೇಕಿದೆ' ಎಂದು ಕವಿ ನಿಸಾರ್ ಅಹಮದ್ ಅವರು ಹೇಳುತ್ತಾರೆ ?<br>*ಉತ್ತರ :*<br>ನಾವೆಲ್ಲರೂ ಭೂಮಿತಾಯ ಕುಡಿಗಳೆಂದು ಪಣವ ತೊಡಬೇಕೆಂದು ಕವಿ ನಿಸಾರ್ ಅಹಮದ್ ಅವರು ಹೇಳುತ್ತಾರೆ. | |
| 10. | ಕವಿಯ ಆಶಯದಂತೆ 'ಸರ್ವಶಕ್ತಿದೂತ' ಅವತರಿಸುವುದು ಯಾವಾಗ ?<br>*ಉತ್ತರ :*<br>ಅಕ್ಷರ ಎಂಬ ಮಾಯಾದೀಪವನ್ನು ಉಜ್ಜಿದರೆ ಸರ್ವಶಕ್ತಿದೂತ ಅವತರಿಸುತ್ತಾನೆ ಎಂದು ಕವಿ ಹೇಳಿದ್ದಾರೆ. | |
| 11. | ಬಡತನಕ್ಕಿರುವ 'ಚಿಂತೆ' ಯಾವುದೆಂದು ಅಂಬಿಗರ ಚೌಡಯ್ಯ ಹೇಳುತ್ತಾರೆ ?<br>*ಉತ್ತರ :*<br>ಬಡತನಕ್ಕೆ ಉಂಬುವ (ಉಣ್ಣುವ) 'ಚಿಂತೆ'ಯಿರುತ್ತದೆ ಎಂದು ಅಂಬಿಗರ ಚೌಡಯ್ಯ ಹೇಳುತ್ತಾರೆ. | |
| 12. | ಜನಪದರ ಪ್ರಕಾರ ಯಾವ ಮಳೆ ಸುರಿದರೆ ಕೆರೆಗಳು ತುಂಬುತ್ತವೆ ?<br>*ಉತ್ತರ :*<br>ಜನಪದರ ಪ್ರಕಾರ ಸ್ವಾತಿ ಮಳೆ ಸುರಿದರೆ ಕೆರೆಗಳು ತುಂಬುತ್ತವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 13. | ದೊರೆಯಾದವನ ಗುಣ ಯಾವುದಿರಬೇಕೆಂದು ಸೋಮೇಶ್ವರ ಶತಕ ಹೇಳುತ್ತದೆ ?<br>***ಉತ್ತರ :***<br>ಕೋಪಿಸಿಕೊಳ್ಳದೆ ತಾಳ್ಮೆಯಿಂದ ಇರುವುದೇ ದೊರೆಯಾದವನ ಗುಣವಾಗಿರಬೇಕೆಂದು ಸೋಮೇಶ್ವರ ಶತಕ ಹೇಳುತ್ತದೆ. | |
| 14. | ಕವಿ ಸೋಮನ ಪ್ರಕಾರ ನಿಜವಾದ 'ಋಷಿಮುನಿ' ಎಂದರೆ ಯಾರು ?<br>***ಉತ್ತರ :***<br>ಕವಿ ಸೋಮನ ಪ್ರಕಾರ ನಿಜವಾದ 'ಋಷಿಮುನಿ' ಎಂದರೆ 'ನಡತೆ' ಮತ್ತು 'ವ್ಯಕ್ತಿತ್ವ'ದಲ್ಲಿ ಪರಿಶುದ್ಧನಾಗಿರುವವನು. | |
| 15. | ದೇವಾಲಯದ ಕಲಶವನ್ನು ನಿಲ್ಲಿಸಿದವರು ಯಾರು ?<br>***ಉತ್ತರ :***<br>ದೇವಾಲಯದ ಕಲಶವನ್ನು ನಿಲ್ಲಿಸಿದವನು ವಿಶುವಿನ ಮಗನಾದ ಮುಕುಂದ / ಧರ್ಮಪದ. | |
| 16. | ತನ್ನ ಮಗನನ್ನು ಕುರಿತು 'ವಿಶು'ವಿನ ಅಂತರಂಗದಲ್ಲಿ ಮೊಳಗುತ್ತಿದ್ದುದೇನು ?<br>***ಉತ್ತರ :***<br>'ವಿಶು'ವಿನ ಅಂತರಂಗದಲ್ಲಿ ತನ್ನ ಮಗನೇ ನಿಜವಾದ 'ಮಹಾಶಿಲ್ಪಿ' ಎಂದು ಮೊಳಗುತ್ತಿತ್ತು.<br>**ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸುವಿಕೆ :**<br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) | 14 × 2 = 28 |
| 17. | ಅಷ್ಟಾದಶಾಕ್ಷರೀ ಮಂತ್ರವನ್ನು ಬಿಡಿಸಿ ಬರೆಯಿರಿ.<br>***ಉತ್ತರ :***<br>ಅಷ್ಟಾದಶಾಕ್ಷರೀ ಮಂತ್ರವನ್ನು ಬಿಡಿಸಿದಾಗ ವಸುಧಾ, ವಳಯ, ವಿಲೀನ, ವಿಶದ, ವಿಷಯ, ವಿಶೇಷ ಎಂದಾಗುತ್ತದೆ. | |
| 18. | ಐ.ಪಿ.ಎಲ್. ಕ್ರೀಡಾ ಸ್ಪರ್ಧೆಯಲ್ಲಿ ಅನಿಲ್ ಕುಂಬ್ಳೆ ಅವರ ಪಾತ್ರವೇನು ?<br>***ಉತ್ತರ :***<br>ಅನಿಲ್ ಕುಂಬ್ಳೆ ಅವರು ಐ.ಪಿ.ಎಲ್. ಕ್ರೀಡಾ ಸ್ಪರ್ಧೆಯಲ್ಲಿ ಎರಡನೇ ವರ್ಷವೇ ಅತಿ ಹೆಚ್ಚು ವಿಕೆಟ್ ಪಡೆದ ಎರಡನೇ ಬೌಲರ್ ಎಂಬ ಹಿರಿಮೆಯನ್ನೂ, ಮೂರನೇ ವರ್ಷದಲ್ಲಿ ಆರ್.ಸಿ.ಬಿ. ತಂಡವನ್ನು ದ್ವಿತೀಯ ಸ್ಥಾನಕ್ಕೆ ಕೊಂಡೊಯ್ದಿರುವುದೇ ಅನಿಲ್ ಕುಂಬ್ಳೆ ಅವರ ಪಾತ್ರವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 19. | 'ಆಟ' ಮತ್ತು 'ತಂಡ'ದ ಬಗ್ಗೆ ಅನಿಲ್ ಕುಂಬ್ಳೆ ಅವರಿಗಿರುವ ಬದ್ಧತೆಯು ನಿಮ್ಮ ವ್ಯಕ್ತಿತ್ವದ ಮೇಲೆ ಬೀರಿದ ಪರಿಣಾಮವನ್ನು ತಿಳಿಸಿರಿ.<br>***ಉತ್ತರ :***<br>ಆಟಕ್ಕೂ ಮತ್ತು ತಂಡಕ್ಕೂ ಕುಂಬ್ಳೆ ಅವರದ್ದು ನೂರಕ್ಕೆ ನೂರು ಬದ್ಧತೆ. ವೆಸ್ಟ್ ಇಂಡೀಸ್ ವಿರುದ್ಧ ಕಲ್ಕತ್ತದ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ 10 ಓವರಿನಲ್ಲಿ ಕೇವಲ 13 ರನ್ ನೀಡಿ 6 ವಿಕೆಟ್ ಪಡೆದ ಸಾಧನೆಯ ಜೊತೆಗೆ ವೆಸ್ಟ್ ಇಂಡೀಸ್ ವಿರುದ್ಧ ನಡೆದ ಮತ್ತೊಂದು ಪಂದ್ಯವೊಂದರಲ್ಲಿ ಚೆಂಡು ತನ್ನ ದವಡೆಗೆ ಬಡಿದು ಗಾಯವಾಗಿದ್ದರೂ, ಆಟವನ್ನಾಡಿ ಬ್ರಯನ್ ಲಾರಾ ವಿಕೆಟ್ ಪಡೆದಿರುವುದು ನಮ್ಮಲ್ಲಿ ಆಟದ ಬಗೆಗಿನ ಉತ್ಸಾಹ, ಬದ್ಧತೆ, ಸಮಯಸ್ಫೂರ್ತಿ, ದೇಶದ ಬಗ್ಗೆ ಅಭಿಮಾನ, ತಂಡ ಸ್ಫೂರ್ತಿಗೆ ಪ್ರೇರಣೆ ನೀಡುವಂತಹ ಪರಿಣಾಮ ಉಂಟಾಯಿತು. | |
| 20. | ಸ್ವಾತಂತ್ರ್ಯ ಸಂಗ್ರಾಮಕ್ಕೆ ರಾಮಸಿಂಗನ ಕುಟುಂಬದ ಕೊಡುಗೆ ಏನೆಂಬುದನ್ನು ಬರೆಯಿರಿ.<br>***ಉತ್ತರ :***<br>ರಾಮಸಿಂಗನ ತಂದೆಯೂ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಾಣತೆತ್ತಿರುತ್ತಾರೆ. ತಾಯಿ ತುಳಜಾ ಬಾಯಿ ಸ್ವಭಾವತಃ ತ್ಯಾಗಮಯಿ ಆಗಿದ್ದು ಮೋಹನ ಪುರದಲ್ಲಿನ ಸ್ವಾತಂತ್ರ್ಯ ಹೋರಾಟಕ್ಕೆ ತನ್ನ ಮಗನನ್ನು ಆಶೀರ್ವದಿಸಿ ಕಳುಹಿಸಿಕೊಡುತ್ತಾಳೆ. ಈ ಸಂದರ್ಭದಲ್ಲಿ ಮಗ ರಾಮಸಿಂಗನು ಬ್ರಿಟಿಷರ ಗುಂಡೇಟಿಗೆ ಬಲಿಯಾಗಲು ತುಳಜಾಬಾಯಿ ಕಣ್ಣೀರು ಹಾಕದೆ ತಾಯಿ ಭಾರತಿಯ ಧ್ವಜವನ್ನು ಬ್ರಿಟಿಷರ ವಿರುದ್ಧ ಮತ್ತೆ ಎತ್ತಿ ಹಿಡಿದು ಹೋರಾಟ ಮುಂದುವರಿಸುತ್ತಾಳೆ. ಇದು ಸ್ವಾತಂತ್ರ್ಯ ಹೋರಾಟಕ್ಕೆ ರಾಮಸಿಂಗನ ಕುಟುಂಬದ ಕೊಡುಗೆಯಾಗಿದೆ. | |
| 21. | ರಾಮಸಿಂಗನು ಹಿಡಿದ 'ಧ್ವಜ' ಸಿಡಿಯುವ ಪಿಸ್ತೂಲಿಗಿಂತ ಶ್ರೇಷ್ಠ ಹೇಗೆ ? ತಿಳಿಸಿರಿ.<br>***ಉತ್ತರ :***<br>ರಾಮಸಿಂಗನು ಹಿಡಿದ ಧ್ವಜ ಸಿಡಿಯುವ ಪಿಸ್ತೂಲಿಗಿಂತ ಶ್ರೇಷ್ಠ ಹೇಗೆಂದರೆ ಧ್ವಜ ಭಾರತೀಯರೆಲ್ಲರ ಅಭಿಮಾನದ ಸಂಕೇತ, ಏಕತೆ, ಸ್ವಾತಂತ್ರ್ಯದ ಪ್ರತಿರೂಪ. ಇಂತಹ ಧ್ವಜವನ್ನು ದೇಶಾಭಿಮಾನಿ ರಾಮಸಿಂಗ್ ಹಿಡಿದಿದ್ದರಿಂದ ಅದು ಭಾರತೀಯರ ಗುಲಾಮಗಿರಿಯನ್ನು ಪ್ರತಿಭಟಿಸುವಂತಿತ್ತು.<br>ಹಾಗೆಯೇ ಬ್ರಿಟಿಷರು ಹಿಡಿದ ಪಿಸ್ತೂಲು, ಕ್ರೌರ್ಯ, ದಬ್ಬಾಳಿಕೆ, ಹಿಂಸೆಯ ಸಂಕೇತವಾಗಿದ್ದು ಮಾನವತೆಯನ್ನು ವಿರೋಧಿಸುವುದರಿಂದ, ಧ್ವಜವೇ ಶ್ರೇಷ್ಠ ಎಂದು ಹೇಳಬಹುದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 22. | ರಾಮಸಿಂಗನಿಗೂ ಸಿಪಾಯಿಗಳಿಗೂ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>***ಉತ್ತರ :***<br>ಮೋಹನಪುರದಲ್ಲಿ ಎರಡು ರಸ್ತೆಗಳು ಕೂಡುವ ಸ್ಥಳದಲ್ಲಿ ರಾಮಸಿಂಗ್ ಸೇರಿದಂತೆ ಅನೇಕ ಸ್ವಯಂ ಸೇವಕರು ಜಯಕಾರ ಕೂಗುತ್ತಾ ಬಂದು ಸೇರುವರು. ಆಗ ಅಲ್ಲಿಗೆ ಬಂದ ಪೊಲೀಸ್ ವೇಷದ ಇಬ್ಬರು ಸಿಪಾಯಿಗಳು ರಾಮಸಿಂಗನ ನೇತೃತ್ವದ ಗುಂಪನ್ನು ಕುರಿತು ಇಲ್ಲಿ ಸಭೆ ಸೇರಬಾರದೆಂದು ಎಚ್ಚರಿಸುತ್ತಾರೆ. ಅದಕ್ಕಾಗಿ ಡಂಗೂರ ಸಾರಲಾಗಿದೆಯೆಂದು ಹೇಳಿದರು. ಅದಕ್ಕೆ ರಾಮಸಿಂಗನು ಡಂಗೂರ ಸಾರಲು ಇದು ನಿಮ್ಮಪ್ಪನ ಮನೆಯಲ್ಲವೆಂದು ಘರ್ಜಿಸುತ್ತಾನೆ. ಆಗ ಸಿಪಾಯಿಗಳು ಇಲ್ಲಿ ರಾಜ್ಯವಾಳುವವರು ಬ್ರಿಟಿಷ್ ಸರ್ಕಾರ ಎಂದು ಸಮಜಾಯಿಸಿ ನೀಡುತ್ತಾರೆ. ಅಲ್ಲದೆ ನಾವು ಬ್ರಿಟಿಷ್ ಸರ್ಕಾರದ ನೌಕರರು ಎಂದು ರಾಮಸಿಂಗನನ್ನು ಸುಮ್ಮನಿರಿಸಲು ನೋಡುತ್ತಾರೆ. ಆಗ ರಾಮಸಿಂಗನು ಕೋಪದಿಂದ ನೀವು ನೌಕರರಲ್ಲ ಬ್ರಿಟಿಷ್ ಸರ್ಕಾರದ ಗುಲಾಮರು, ಬ್ರಿಟಿಷರ ಆಟ ಭಾರತದಲ್ಲಿ ನಡೆಯಲಾರದೆಂದು ಕೂಗಿ ಹೇಳಿದನು ? | |
| 23. | ಮೊಘಲರು ಪ್ರಾಣಭೀತಿಯಿಂದ ಓಡಿಹೋಗುವಂತೆ ಮಾಡಲು ಕೆಳದಿ ರಾಣಿ ಚೆನ್ನಮ್ಮ ಕೈಗೊಂಡ ಉಪಾಯಗಳೇನು ?<br>***ಉತ್ತರ :***<br>ಮೊಘಲರು ಪ್ರಾಣಭೀತಿಯಿಂದ ಓಡಿಹೋಗುವಂತೆ ಮಾಡಲು ಕೆಳದಿಯ ಚೆನ್ನಮ್ಮ ಕೈಗೊಂಡ ಉಪಾಯಗಳೆಂದರೆ, ಔರಂಗಜೇಬನ ಮಗ ಅಜಮತಾರನ ಜೊತೆಗೆ ಬಂದ ಮೊಘಲರ ಸೈನ್ಯವನ್ನು ದಿಕ್ಕು ತಪ್ಪಿಸಲು ಕೆಳದಿಯ ರಾಣಿ ಚೆನ್ನಮ್ಮ ತನ್ನ ರಾಜಧಾನಿಯನ್ನು ಭುವನಗಿರಿಗೆ ಸ್ಥಳಾಂತರಿಸಿದಳು.<br>ತನ್ನ ರಾಜ್ಯದ ಇಕ್ಕಟ್ಟಿನ ಬೆಟ್ಟ, ಕಣಿವೆ, ಕಾಲುದಾರಿಗಳಲ್ಲಿ, ಕಳ್ಳದಾರಿಗಳಲ್ಲಿ ತನ್ನ ಸೈನ್ಯವನ್ನು ನಿಲ್ಲಿಸಿ ಮೊಘಲ್ ಸೈನ್ಯಕ್ಕೆ ಅನ್ನ, ನೀರು ಸಿಗದಂತೆ ಮಾಡಿದಳು.<br>ದಟ್ಟ ಕಾಡಿನ ಮಧ್ಯೆ ಆಹಾರವಿಲ್ಲದೆ, ಸುರಿವ ಮಳೆಗೆ ದಾರಿಕಾಣದೆ ಸೈನ್ಯ ಕಕ್ಕಾಬಿಕ್ಕಿಯಾಗಿ ಪಲಾಯನಗೈಯ್ಯುವಂತೆ ಮಾಡಿದಳು. | |
| 24. | ಮನುಷ್ಯನಲ್ಲಿರುವ 'ಚಿಂತೆ'ಯನ್ನು ಕುರಿತು ಅಂಬಿಗರ ಚೌಡಯ್ಯ ಹೇಳಿರುವುದೇನು ?<br>***ಉತ್ತರ :***<br>ಮನುಷ್ಯ ಬಡತನದಲ್ಲಿದ್ದರೆ ಮೊದಲು ಆತನಿಗೆ ಅನ್ನದ ಚಿಂತೆ, ಕಾಡುತ್ತದೆ. ಅನ್ನ ದೊರೆತಾದ ಮೇಲೆ ತೊಡುವ ಬಟ್ಟೆಯ ಚಿಂತೆ, ನಂತರ ಇಡುವ ಚಿಂತೆ, ಇದಾದನಂತರ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಹೆಂಡತಿ, ಮಕ್ಕಳ ಚಿಂತೆ ಅತನ ಮೇಲೆ ಎರಗುತ್ತದೆ. ಎಲ್ಲಾ ಚಿಂತೆಗಳೂ ಪರಿಹಾರವಾದ ಮೇಲೆಯೂ ಆತನಿಗೆ ಮರಣದ ಚಿಂತೆ ಭಾದಿಸುತ್ತದೆ ಎಂದು ಅಂಬಿಗರ ಚೌಡಯ್ಯ ಮನುಷ್ಯನ ಚಿಂತೆ ಕುರಿತು ಹೇಳಿದ್ದಾರೆ. | |
| 25. | ಅಂಬಿಗರ ಚೌಡಯ್ಯ ಅವರು ನಿರೂಪಿಸಿರುವಂತೆ, 'ನಿಜ ಶರಣನಾಗುವುದು' ಹೇಗೆ ? ತಿಳಿಸಿರಿ. | |
| | *ಉತ್ತರ :* | |
| | ಮನುಷ್ಯ ನಿತ್ಯವೂ ಒಂದಿಲ್ಲೊಂದು ಚಿಂತೆಯಲ್ಲಿ ನರಳುತ್ತಿದ್ದು, ನಮ್ಮ ಆದಿ ದೈವ ಶಿವನ ಚಿಂತೆ (ಭಕ್ತಿ)ಯಲ್ಲಿ ಇರುವವರನ್ನು ಯಾರೊಬ್ಬರನೂ ಕಾಣೆ. ಹಾಗಾಗಿ ಮನುಷ್ಯನೇನಾದರೂ ತನ್ನ ಬದುಕನ್ನು 'ಶಿವನ ಚಿಂತೆ'ಯಲ್ಲಿ ಕಳೆದರೆ ಆಗ ಆತನೊಬ್ಬ ನಿಜ ಶರಣನಾಗುತ್ತಾನೆ ಎಂದು ಅಂಬಿಗರ ಚೌಡಯ್ಯ ಹೇಳಿದ್ದಾರೆ. | |
| 26. | ರೈತನು ಮಳೆರಾಯನಲ್ಲಿ ಏನೆಂದು ಪ್ರಾರ್ಥಿಸಿಕೊಳ್ಳುತ್ತಾನೆ ? | |
| | *ಉತ್ತರ :* | |
| | ಅಪ್ಪ, ಮಳೆರಾಯ, ನೀ ಭೂಮಿಯ ಮೇಲೆ ಬಾರದೆ, ದನಕರುಗಳೆಲ್ಲಾ ಮೇಯಲು ಮೇವಿಲ್ಲದೆ ಸಪ್ಪೆದಂಟಾಗಿ ಹೋಗಿವೆ. ಹಾಗಾಗಿ ದನಕರುಗಳನ್ನೂ, ನಮ್ಮನ್ನೂ, ಮಳೆರಾಯ ನೀ ಬಂದು ರಕ್ಷಿಸು ಎಂದು ರೈತನು ಮಳೆರಾಯನಲ್ಲಿ ಪ್ರಾರ್ಥಿಸಿಕೊಳ್ಳುತ್ತಾನೆ. | |
| 27. | ಸ್ವಾತಿ ಮಳೆ ಬೀಳುವುದರಿಂದ ರೈತನಿಗಾಗುವ ಪ್ರಯೋಜನವೇನು ? | |
| | *ಉತ್ತರ :* | |
| | ಸ್ವಾತಿ ಮಳೆ ಬೀಳುವುದರಿಂದ ಭೂಲೋಕದ ಸಾವಿರಾರು ಕೆರೆಗಳು ತುಂಬಿಕೊಳ್ಳುತ್ತವೆ. ಕುಣಿಗಲ್ ಕೆರೆಯಲ್ಲಿ ಕುಚ್ಚಲ ಮೀನುಗಳು ಹೆಚ್ಚಾಗುತ್ತವೆ. ಮೀನು ಹಿಡಿಯಲು ಬರುವವರನ್ನು ಕಂಡು, ಕೈಗೆ ಸಿಗದ ಕೆರೆಯ ಕುಚ್ಚಲ ಮೀನುಗಳು ನಗಾಡುವಂತೆಯೂ ಕಾಣುತ್ತವೆ ಎಂದು ರೈತರು (ಜನಪದರು) ಭಾವಿಸುತ್ತಾ ಸಂಭ್ರಮಪಡುತ್ತಾರೆ. | |
| 28. | 'ನಾವೆಲ್ಲರೂ ಒಂದೇ ಎಂದು' ಕವಿ ನಿಸಾರ್ ಅಹಮದ್ ಅವರು ಹೇಳಲು ಕಾರಣವೇನು ? | |
| | *ಉತ್ತರ :* | |
| | 'ಭಾರತ ದೇಶದಲ್ಲಿ ವಿಭಿನ್ನ ಸ್ವಭಾವದ ಜನಾಂಗವಿದ್ದರೂ ಅವರೆಲ್ಲರೂ ಭಾರತೀಯರೇ. ಹಿಂದೂ, ಕ್ರೈಸ್ತ, ಇಸ್ಲಾಂ ಎಂಬ ವಿವಿಧ ಧರ್ಮಗಳಿದ್ದರೂ ಅವರೆಲ್ಲರ ಉಸಿರು ಒಂದೇ. ಹರಿಯುವ ರಕ್ತದ ಬಣ್ಣ ಒಂದೇ, ತಿನ್ನುವ ಅನ್ನವೂ ಒಂದೇ, ಬೀರುವ ಬೆಳಕೂ ಒಂದೇ ಆಗಿರುವುದರಿಂದ 'ನಾವೆಲ್ಲರೂ ಒಂದೇ' ಎಂದು ಕವಿ ನಿಸಾರ್ ಅಹಮದ್ ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 29. | 'ಶಿಕ್ಷಣದಿಂದ ಹೊಸ ಮನುಷ್ಯ ರೂಪುಗೊಳ್ಳುತ್ತಾನೆ' ಹೇಗೆ ? 'ಮಾಯದೀಪ' ಪದ್ಯವನ್ನು ಆಧರಿಸಿ ನಿಮ್ಮದೇ ಮಾತುಗಳಲ್ಲಿ ಬರೆಯಿರಿ.<br>***ಉತ್ತರ :***<br>ಶಿಕ್ಷಣವೆಂಬುದು ಅದ್ಭುತವಾದ ಮಾಯಾದೀಪ. ಅದು ಎಲ್ಲರಿಗೂ ಬೆಳಕನ್ನು ಕೊಡುತ್ತದೆ. ಇದರಿಂದ ಆತ ತನ್ನ ಕಷ್ಟಗಳನ್ನು ಎದುರಿಸುವ, ಗೆಲ್ಲುವ ಸಾಮರ್ಥ್ಯವನ್ನು ತಿಳಿಸಿಕೊಡುತ್ತದ. ಶಿಕ್ಷಣದಿಂದ ವ್ಯಕ್ತಿ ಎಲ್ಲಿಯಾದರೂ ಬದುಕಬಹುದು. ಅದು ಈತನಿಗೆ ನೆರವು ನೀಡುತ್ತದೆ. ಕಲಿತ ಅಕ್ಷರ ರೂಪದ ಶಿಕ್ಷಣ ವ್ಯಕ್ತಿಯನ್ನು ಸರ್ವಶಕ್ತನನ್ನಾಗಿಸುತ್ತದೆ. ಆತ ಕಲಿತ ವಿದ್ಯೆ ಜೀವನ ಪರ್ಯಂತ ಕೈ ಹಿಡಿದು ನಡೆಸುತ್ತದೆ. | |
| 30. | ಈರಪ್ಪ ಎಂ. ಕಂಬಳಿಯವರು ಕಂಡಂತೆ ಬಿಸಿಲು ಸೀಮೆಯ ಜನರ ಸ್ವಭಾವ ಎಂತಹುದು ?<br>***ಉತ್ತರ :***<br>ಬಿಸಿಲು ಸೀಮೆಯ ಜನರು ಸ್ವಭಾವತಃ ಕಷ್ಟ ಸಹಿಷ್ಣುಗಳು. ಸಾಹಸ ಪ್ರಿಯರು ಹಾಗೂ ಮುಗ್ಧತೆಯ ಸ್ವಭಾವವುಳ್ಳವರೆಂದು ಈರಪ್ಪ ಕಂಬಳಿ ಅವರು ಹೇಳಿದ್ದಾರೆ. | |
| | **ಸಂದರ್ಭಸಹಿತ ವಿವರಣೆ :** | 4 × 3 = 12 |
| | ಕೃತಿ–ಕರ್ತೃ | 1 ಅಂಕ |
| | ಯಾರು–ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | "ಕರ್ನಾಟಕ ವಂಗ, ಆಂಧ್ರ, ಭಾರತೀಯರೊಂದೆ"<br>***ಉತ್ತರ :***<br>ಕೆ.ಎಸ್. ನಿಸಾರ್ ಅಹಮದ್ ಅವರು ಬರೆದ 'ಸಮಗ್ರ ಕವಿತೆಗಳು' ಕವನ ಸಂಕಲನದಿಂದಾಯ್ದ 'ಒಂದೇ' (ಭೂಮಿತಾಯ ಕುಡಿಗಳು) ಎಂಬ 'ಪದ್ಯ' ಭಾಗದಿಂದ ಈ ವಾಕ್ಯವನ್ನು ಆಯ್ದುಕೊಳ್ಳಲಾಗಿದೆ.<br>ಈ ಮಾತನ್ನು ಕವಿ ಹೇಳಿದ್ದಾರೆ. ಭಾರತವು ವಿಶ್ವದಲ್ಲೇ ವೈವಿಧ್ಯವನ್ನು ಹೊಂದಿದ ರಾಷ್ಟ್ರ. ಅನೇಕ ಧರ್ಮ, ಭಾಷೆ, ತೊಡುಗೆ, ಆಹಾರ ಪದ್ಧತಿಗಳನ್ನು ಹೊಂದಿದ್ದರೂ, ನಾವೆಲ್ಲಾ ಸಹೋದರರಂತೆ ಜೀವನ ಸಾಗಿಸುತ್ತಿದ್ದೇವೆ. ಜೊತೆಗೆ ನಮ್ಮೆಲ್ಲರ ರಕ್ತದ ಬಣ್ಣವೂ ಒಂದೇ ಆಗಿದ್ದು ಭೂಮಿ ತಾಯ ಮಕ್ಕಳಾದ ನಾವೆಲ್ಲಾ ಕರ್ನಾಟಕದಲ್ಲಿರಲಿ, ಆಂಧ್ರದಲ್ಲಿರಲಿ, ಬಂಗಾಳದಲ್ಲಿದ್ದರೂ ಒಂದೇ ಎಂದು ಕವಿ ಹೇಳಿದ್ದಾರೆ.<br>ದೇಶದ ಏಕತೆಯನ್ನು ಬಿಂಬಿಸುವುದೇ ಈ ವಾಕ್ಯದ ಸ್ವಾರಸ್ಯವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 32. | "ಗಾನ ಕೇಳಿ ಮೌನ ತಾಳಿ ಮೂಕವಾಯ್ತು ಭಾವನಾ"<br>***ಉತ್ತರ :***<br>ಕವಿ ಚೆನ್ನವೀರ ಕಣವಿ ಅವರು ಬಂದಿರುವ 'ಹೂವು ಹೊರಳುವವು ಸೂರ್ಯನ ಕಡೆಗೆ' ಎಂಬ ಕವನ ಸಂಕಲನದಿಂದಾಯ್ದ 'ಕೋಗಿಲೆ' ಎಂಬ ಪದ್ಯಭಾಗದಿಂದ ಈ ವಾಕ್ಯವನ್ನು ಆಯ್ದುಕೊಳ್ಳಲಾಗಿದೆ.<br>ಈ ಮಾತನ್ನು ಕವಿ ಹೇಳಿದ್ದಾರೆ. ಹಕ್ಕಿಗಳ ಕಲರವ ಮನಸ್ಸಿಗೆ ಮುದವನ್ನು ನೀಡುತ್ತದೆ. ಅದರಲ್ಲೂ ಕೋಗಿಲೆಯ ಧ್ವನಿಯು ಮಧುರವಾಗಿದ್ದು ಜಗತ್ತನ್ನೇ ಗಾನಮಯವನ್ನಾಗಿಸುತ್ತದೆ. ಇಂತಹ ಕೋಗಿಲೆಯು ವಸಂತ ಮಾಸದ ಚಿಗುರಾದ ಕೆಂಪು ತಳಿರಿನ ಮಾಮರದಲ್ಲಿ ಕುಳಿತು ಉಲಿಯುವ ಅದರ ಧ್ವನಿಯು ಇನ್ನೂ ಸುಮಧುರವಾಗಿರುತ್ತದೆ ಮನುಜ ಲೋಕದ ಭಾವಗಳೆಲ್ಲಾ ಈ ಇಂಪಾದ ಧ್ವನಿಯನ್ನು ಕೇಳಿ ಮೂಕವಾಗಿ ಹೋಯಿತು ಎಂದು ಕವಿ ಬಾವ ಪರವಶತೆಯಿಂದ ಹೇಳಿದ್ದಾರೆ.<br>ಕೋಗಿಲೆಯ ಇಂಪಾದ ಧ್ವನಿಯ ವರ್ಣನೆ ಈ ಸಾಲಿನ ಸ್ವಾರಸ್ಯವಾಗಿದೆ. | |
| 33. | "ನಾವು ನಿಮ್ಮನ್ನು ಕೈಬಿಡುವಂತಿಲ್ಲ"<br>***ಉತ್ತರ :***<br>ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಬರೆದಿರುವ 'ಅಮೆರಿಕದಲ್ಲಿ ಗೊರೂರು' ಎಂಬ ಪ್ರವಾಸ ಕಥನದಿಂದ ಆಯ್ದ 'ಲಾಕಪ್ಪಿನಲ್ಲಿ ಒಂದು ರಾತ್ರಿ' ಎಂಬ ಗದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಪೊಲೀಸಿನವನು ಲೇಖಕನಿಗೆ ಹೇಳಿದನು. ಲೇಖಕರು ಮಿನಿ ಪೊಲೀಸ್ ನಗರದಲ್ಲಿ ತನ್ನ ಗೆಳೆಯನಿಂದ ತಪ್ಪಿಸಿಕೊಂಡು ದಾರಿ ತಪ್ಪಿ ಅಲೆಯುತ್ತಿರುವಾಗ ಆಕಸ್ಮಾತ್ತಾಗಿ ಟ್ರಾಫಿಕ್ ಪೊಲೀಸಿನವನೊಬ್ಬ ಇವರ ಕಣ್ಣಿಗೆ ಬೀಳುತ್ತಾನೆ. ಆಗ ಲೇಖಕರು ತನ್ನ ಈ ಸ್ಥಿತಿಗೆ ಕಾರಣವನ್ನು ಪೊಲೀಸಿನವನಿಗೆ ತಿಳಿಸುತ್ತಾರೆ. ಇದನ್ನು ಅರಿತ ಪೊಲೀಸಿನವನು ತನಗಿರುವ ಕಾನೂನಿನ ವ್ಯಾಪ್ತಿ ಹಾಗೂ ತನ್ನ ಹೃದಯವಂತಿಕೆಯನ್ನು ಆ ಕ್ಷಣದಲ್ಲಿ ಹೊರಗೆ ತೋರ್ಪಡಿಸದೆ, ಲೇಖಕರನ್ನು ಕುರಿತು "ನೀವು ಈಗ ನನ್ನ ವಶವಾಗಿದ್ದೀರಿ. ನಾನು ನಿಮ್ಮನ್ನು ಕೈಬಿಡುವಂತಿಲ್ಲ. ನನ್ನ ಮನೆಗೆ ಹೋಗೋಣ ನಡೆಯಿರಿ" ಎಂದು ಏಳು ಮೈಲಿ ದೂರವಿರುವ ತನ್ನ ಮನೆಗೆ ಕಾರಿನಲ್ಲೇ ಕರೆದುಕೊಂಡು ಹೊರಟನು.<br>ಮಿನಿಪೊಲೀಸ್ ನಗರದ ಪೊಲೀಸರು ಏನು ಮಾಡಿದರೂ ಕಾನೂನು ಬಿಟ್ಟು ಮಾಡುವುದಿಲ್ಲ ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 34. | "ತಾಯಿ, ಎಂದು ಕರೆದ ಕನ್ನಡದ ಕಂದ ಯಾರು ?"<br>***ಉತ್ತರ :***<br>ವಿಜಯಲಕ್ಷ್ಮಿ ಈರಪ್ಪಾ ಬಾಳೇಕುಂದ್ರಿ ಅವರು ಬರೆದ 'ಜೀವನ ಧಾರೆ' ಕೃತಿಯಿಂದ ಆಯ್ದ 'ಕರ್ನಾಟಕದ ವೀರವನಿತೆಯರು' ಎಂಬ ಗದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.<br>ಈ ಮಾತನ್ನು 'ತಾಯಿ' ಎಂದು ಕರೆದ ಸಂಗೊಳ್ಳಿರಾಯಣ್ಣನಿಗೆ ರಾಣಿ ಚೆನ್ನಮ್ಮ ಅಭಿಮಾನ ಮತ್ತು ವೀರತನದ ಭಾವದಿಂದಲೇ ಕೇಳಿದಳು.<br>ಕಿತ್ತೂರ ರಾಣಿ ಚೆನ್ನಮ್ಮ ಮೊಘಲರು ಮತ್ತು ಬ್ರಿಟಿಷರನ್ನು ಸೋಲಿಸಿದಾಗ, ಮುಂದೆ ಬ್ರಿಟಿಷರು ಹಿತಶತ್ರುಗಳೊಂದಿಗೆ ಪಿತೂರಿ ನಡೆಸಿ ಸಿಡಿಮದ್ದಿನಲ್ಲಿ ಸಗಣಿ ಸೇರಿಸಿ, ರಾಣಿ ಚೆನ್ನಮ್ಮನ ತೋಪುಗಳು ಹಾರದಂತೆ ಮೋಸ ಮಾಡುತ್ತಾರೆ. ಆಗ ಸೋತ ಚೆನ್ನಮ್ಮನನ್ನು ಹಿಡಿದು ಸೆರೆಯಲ್ಲಿಡುತ್ತಾರೆ. ಈ ಸಂದರ್ಭದಲ್ಲಿ ರಾಣಿಯನ್ನು ಸೆರೆಮನೆಯಲ್ಲಿಯೇ ಕಾಣಲು ಬಂದ ರಾಯಣ್ಣ ಚೆನ್ನಮ್ಮನ ಸ್ಥಿತಿಯನ್ನು ಕಂಡು ಗದ್ಗತನಾಗುತ್ತಾನೆ. ರಾಯಣ್ಣನ ನೋವಿನ ಧ್ವನಿಯನ್ನು ಕೇಳಿದ ರಾಣಿ ಚೆನ್ನಮ್ಮ, "ತಾಯಿ ಎಂದು ಕರೆದ ಕನ್ನಡದ ಕಂದ ಯಾರು ?" ಎಂದು ಮಾತೃಹೃದಯದ ವಾತ್ಸಲ್ಯ ಹಾಗೂ ಒಳಗಿರುವ ನೋವಿನಿಂದ ಕೇಳುತ್ತಾಳೆ.<br>ರಾಣಿ ಚೆನ್ನಮ್ಮನ ಮೇಲೆ ಸಂಗೊಳ್ಳಿ ರಾಯಣ್ಣನಿಗಿದ್ದ ಅಭಿಮಾನದ ಪ್ರೀತಿ ಮತ್ತು ಕಾಳಜಿ ಹಾಗೂ ರಾಣಿಯ ಮಾತೃ ವಾತ್ಸಲ್ಯವೇ ಇಲ್ಲಿನ ಸ್ವಾರಸ್ಯವಾಗಿದೆ. | |
| 35. | **ಪದ್ಯಭಾಗ ಪೂರ್ಣ ಮಾಡುವುದು :**<br>(ತಪ್ಪಿಲ್ಲದೆ ಬರೆದ ಪೂರ್ಣ ಸಾಲುಗಳಿಗೆ ಒಟ್ಟು ಮೂರು ಅಂಕಗಳು)<br>ಅಕ್ಷರವೆಂಬುದು ..................................................<br>..........................................................................<br>..........................................................................<br>...................................................... ಹೊಸರೂಪ.<br>***ಅಥವಾ***<br>ದೀಪ ................................................................<br>..........................................................................<br>..........................................................................<br>............................................................ ಸಮಸ್ತ. | $1 \times 3 = 3$ |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

***ಉತ್ತರ :***

ಅಕ್ಷರವೆಂಬುದು ಅಲ್ಲಾದೀನನ
ಅದ್ಭುತ ಮಾಯಾದೀಪ
ಅದು ವಶವಾದರೆ ನಿನಗೆ ನೀಡುವುದು
ಹೊಸ ಜೀವನ, ಹೊಸ ರೂಪ.

**ಅಥವಾ**

ದೀಪ ಉಜ್ಜಿದರೆ ಅವತರಿಸುವನು
ಸರ್ವಶಕ್ತದೂತ
ಅವನ ಬೆನ್ನೇರಿ ನೀ ಸಂಚರಿಸುವೆ
ಬ್ರಹ್ಮಾಂಡ ಸಮಸ್ತ.

**ಕವಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ವಿವರಿಸಿ ಬರೆಯುವುದು :** 2 × 3 = 6

| | |
|---|---|
| ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| ಕೃತಿಗೆ | 1 ಅಂಕ |
| ಭಾಷಾಶೈಲಿಗೆ | 1 ಅಂಕ |
| ಒಟ್ಟು | 3 ಅಂಕಗಳು |

36 *ಚೆನ್ನವೀರ ಕಣವಿ :*

***ಉತ್ತರ :***

ಚೆನ್ನವೀರ ಕಣವಿಯವರು ೧೯೨೮ ರ ಜೂನ್ ೨೮ರಂದು ಗದಗ ಜಿಲ್ಲೆಯ ಹೊಂಬಳದಲ್ಲಿ ಜನಿಸಿದರು. ಇವರು 'ನೆಲಮುಗಿಲು', 'ಆಕಾಶಬುಟ್ಟಿ', 'ಭಾವಜೀವ', 'ಜೀವಧ್ವನಿ', 'ಮಣ್ಣಿನ ಮೆರವಣಿಗೆ', 'ಹೂವು ಹೊರಳುವವು ಸೂರ್ಯನ ಕಡೆಗೆ' ಮುಂತಾದ ಕವನ ಸಂಕಲನಗಳನ್ನು ರಚಿಸಿದ್ದಾರೆ. 'ಸಮತೋಲನ' ಮತ್ತು 'ಕಾವ್ಯಾನುಸಂಧಾನ' ಎಂಬ ಎರಡು ವಿಮರ್ಶಾ ಕೃತಿಗಳನ್ನು ಕವಿ ಚೆನ್ನವೀರ ಕಣವಿ ಅವರು ಬರೆದಿದ್ದಾರೆ.

37. *ಅ.ರಾ. ಮಿತ್ರ :*

***ಉತ್ತರ :***

ಅ.ರಾ. ಮಿತ್ರ ಅವರು ೧೯೩೫ ರ ಫೆಬ್ರವರಿ ೨೫ ರಂದು ಹಾಸನ ಜಿಲ್ಲೆ 'ಬೇಲೂರಿ'ನಲ್ಲಿ ಜನಿಸಿದರು. ಇವರ ತಂದೆಯ ಊರು ಮಂಡ್ಯ ಜಿಲ್ಲೆಯ ಅಕ್ಕಿ ಹೆಬ್ಬಾಳು.

ಇವರು 'ಆರತಕ್ಷತೆ', 'ನಾನೇಕೆ ಕೊರಯುತ್ತೇನೆ' ಎಂಬ ಲಲಿತ ಪ್ರಬಂಧಗಳನ್ನೂ, ಪ್ರೇಮ ನದಿಯ ದಡದಲ್ಲಿ ಎಂಬ ಸಣ್ಣಕಥೆಯನ್ನೂ, 'ಒಳನೋಟಗಳು', 'ಛಂದೋಮಿತ್ರ', 'ಕುಮಾರವ್ಯಾಸಭಾರತ ಕಥಾಮಿತ್ರ' ಎಂಬ ವಿಮರ್ಶಾ ಕೃತಿಗಳನ್ನೂ 'ಸ್ಮರಣೀಯರು' ಎಂಬ ಕವನ ಸಂಕಲನವನ್ನೂ ಬರೆದಿದ್ದಾರೆ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಎಂಟು–ಹತ್ತು ವಾಕ್ಯಗಳಿಗೆ ಮೀರದಂತೆ ಉತ್ತರಿಸುವುದು :** | 2 × 4 = 8 |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |

38. 'ಪೊಲೀಸಿನವರಲ್ಲೂ ಮಾನವೀಯತೆ ಇದೆ' ಎಂಬ ಮಾತು ಲಾಕಪ್ಪಿನಲ್ಲಿ ಒಂದು ರಾತ್ರಿ ಪಾಠದಲ್ಲಿ ಹೇಗೆ ನಿರೂಪಿಸಲ್ಪಟ್ಟಿದೆ ?

***ಅಥವಾ***

ಮಿನಿಪೊಲೀಸ್ ನಗರದ 'ಲಾಕಪ್ಪಿನಲ್ಲಿ' ಒಂದು ರಾತ್ರಿ ಕಳೆದ ಗೊರೂರು ರಾಮಸ್ವಾಮಿ ಅವರ ಅನುಭವದಿಂದ ನಿಮ್ಮಲ್ಲಿ ಮೂಡಿದ ತಿಳುವಳಿಕೆಯನ್ನು ಬರೆಯಿರಿ.

***ಉತ್ತರ :***

ಗೊರೂರು ರಾಮಸ್ವಾಮಿ ಅವರು ಮಿನಿಪೊಲೀಸ್ ನಗರದಲ್ಲಿ ತನ್ನ ಸ್ನೇಹಿತನಿಂದ ತಪ್ಪಿಸಿಕೊಂಡು, ಏನೂ ತೋಚದೆ ಚಡಪಡಿಸುತ್ತಾ ಅಲೆಯುತ್ತಿದ್ದಾಗ ಅಕಸ್ಮಾತ್ತಾಗಿ ಟ್ರಾಫಿಕ್ ಪೊಲೀಸಿನ ಪೇದೆಯೊಬ್ಬ ಇವರ ಕಣ್ಣಿಗೆ ಬೀಳುತ್ತಾನೆ. ಈತ ಆಗತಾನೆ ಕರ್ತವ್ಯವನ್ನು ಮುಗಿಸಿಕೊಂಡು ಮನೆಗೆ ಬರುತ್ತಿರುತ್ತಾನೆ.

'ಪೊಲೀಸ್‌ನವನನ್ನು ಕಂಡ ಲೇಖಕರು ತನ್ನ ಸ್ಥಿತಿಯ ವಿಚಾರವನ್ನೆಲ್ಲಾ ಆತನಿಗೆ ವಿವರಿಸುತ್ತಾರೆ. ಕೂಡಲೇ ಪೊಲೀಸಿನವನು ಲೇಖಕರನ್ನು ಕುರಿತು "ಈಗ ನೀವು ನನ್ನ ವಶವಾದಿರಿ" ಎಂದು ಹೇಳಿ ತನ್ನ ಕಾರಿನಲ್ಲಿಯೇ ಏಳು ಕಿ.ಮೀ. ದೂರವಿರುವ ತನ್ನ ಮನೆಗೆ ಕರೆದುಕೊಂಡು ಹೋದನು. ಮನೆಯಲ್ಲಿ ಲೇಖಕರಿಗೆ ರಾತ್ರಿಯ ಊಟಕ್ಕಾಗಿ ಬ್ರೆಡ್, ಹಾಲು, ಹಣ್ಣು, ಬಿಸ್ಕತ್‌ಗಳನ್ನು ನೀಡಿದನು. ಜೊತೆಗೆ ಊಟವಾದ ನಂತರ ಮನೆಯ ಸ್ವಚ್ಛವಾದ ಲಾಕಪ್ಪಿನಲ್ಲಿಯೇ ಲೇಖಕರಿಗೆ ಮಲಗಲು ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಟ್ಟನು.

ತಪ್ಪಸಿಕೊಂಡು ಏನೂ ತೋಚದೆ ಅಲೆಯುತ್ತಿದ್ದ ಲೇಖಕರನ್ನು ಪೊಲೀಸಿನವನು ಹೀಗೆ ಮನೆಗೆ ಕರೆದುಕೊಂಡು ಹೋಗಿ ಮನುಷ್ಯರಂತೆಯೇ ಉಪಚರಿಸಿದ್ದರಿಂದ ಪೊಲೀಸಿನವರಿಗೂ ಮಾನವೀಯತೆ ಇದೆ ಎಂಬುದು ನಮಗೆ ತಿಳಿದು ಬರುತ್ತದೆ.

**ಅಥವಾ**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
| --- | --- | --- |
| | ಮಿನಿಪೊಲೀಸ್ ನಗರದ 'ಲಾಕಪ್ಪಿನಲ್ಲಿ' ಒಂದು ರಾತ್ರಿ ಕಳೆದ ಗೊರೂರು ರಾಮಸ್ವಾಮಿ ಅವರ ಅನುಭವದ ಪ್ರವಾಸ ಕಥನದಿಂದ ನಮ್ಮಲ್ಲಿ ಮೂಡಿದ ತಿಳುವಳಿಕೆ ಎಂದರೆ, ಕಾಣದ ಊರಿನಲ್ಲಿ ನಾವು ಪ್ರವಾಸ ಕೈಗೊಂಡರೆ ಪ್ರವಾಸ ತಂಡ ಅಥವಾ ಜೊತೆಯವರಿಂದ ತಪ್ಪಿಸಿಕೊಳ್ಳಬಾರದು. ಕಾರಣಾಂತರದಿಂದ ತಪ್ಪಿಸಿಕೊಂಡಿದ್ದಲ್ಲಿ; ತಂಡದ ಅಥವಾ ಸ್ನೇಹಿತರ ವಿಳಾಸವಾಗಲಿ, ದೂರವಾಣಿ ಸಂಖ್ಯೆಯಾಗಲಿ ನಮ್ಮಲ್ಲಿ ಇರಲೇಬೇಕು. ಜೊತೆಗೆ ಪೊಲೀಸಿನವರನ್ನು ನಾವು ನಂಬಿ ಅವರ ಸಲಹೆ ಸೂಚನೆಗಳನ್ನು ತೆಗೆದುಕೊಳ್ಳಬೇಕು. ಪೊಲೀಸಿನವರೂ ಕೂಡ ನಮ್ಮಂತೆಯೇ ಮಾನವತೆಯುಳ್ಳ ಹೃದಯವಂತರು ಎಂಬ ಅರಿವು ನಮ್ಮದಾಗುತ್ತದೆ. | |
| 39. | ಮನಸ್ಸಿನ ಶುದ್ಧತೆಯನ್ನು ಕಾಪಾಡಿಕೊಳ್ಳುವುದು ಹೇಗೆಂದು ಪುರಂದರದಾಸರು ಹೇಳಿದ್ದಾರೆ ?<br>***ಅಥವಾ***<br>ವ್ಯಕ್ತಿಯೊಬ್ಬ ತನ್ನ ಮನಸ್ಸನ್ನು ಶೋಧಿಸಿಕೊಳ್ಳಲು 'ಶ್ರೀ ಪುರಂದರ ವಿಠಲನ' ನಾಮಸ್ಮರಣೆಯನ್ನು ಮಾಡುತ್ತಲೇ ಇರಬೇಕು. ಹೇಗೆ ? ವಿವರಿಸಿರಿ.<br>***ಉತ್ತರ :***<br>ಪುರಂದರದಾಸರ ಪ್ರಕಾರ ಮನಸ್ಸಿನ ಶುದ್ಧತೆಯನ್ನು ಕಾಪಾಡಿಕೊಳ್ಳುವುದು ಹೇಗೆಂದರೆ ಮನುಷ್ಯನೆನಿಸಿಕೊಂಡವನು ಧರ್ಮ, ಅಧರ್ಮಗಳ ಅಂತರ ತಿಳಿದುಕೊಂಡು, ಅಧರ್ಮದ ಬೇರನ್ನು ಕತ್ತರಿಸಿ ನಿರ್ಮಲತೆಯಿಂದ ಪರಬ್ರಹ್ಮನ ಪಾದಕಮಲವನ್ನು ನಿರಂತರವಾಗಿ ಭಜಿಸಬೇಕು.<br>ಅಲ್ಲದೆ ದೇಹವನ್ನು ದಂಡಿಸಿ, ಅನ್ಯಕ್ಕೆಳಸುವ ಮನಸ್ಸನ್ನು ಖಂಡಿಸಿ, ಮನುಷ್ಯ ಸನ್ಮಾರ್ಗದಲ್ಲಿ ನಡೆದಾಗ ಭಗವಂತನ ಸನ್ನಿಧಿಯ ಮುಕ್ತಿ ನಮಗೆ ಲಭಿಸಿದಂತಾಗುತ್ತದೆ. ಅಲ್ಲದೆ ನೀತಿವಂತರ ಸಂಗವನ್ನು ಮಾಡಿಕೊಳ್ಳುತ್ತಾ, ಪುರಂದರ ವಿಠಲನ ನಾಮಸ್ಮರಣೆಯಲ್ಲಿ ನಿರಂತರವಾಗಿ ಬದುಕುವುದರಿಂದ ಪ್ರತಿಯೊಬ್ಬರ ಮನಸ್ಸು ಶುದ್ಧವಾಗುತ್ತದೆ ಎಂದು ಪುರಂದರದಾಸರು ಹೇಳಿದ್ದಾರೆ.<br>***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ವ್ಯಕ್ತಿಯೊಬ್ಬ ತನ್ನ ಮನಸ್ಸನ್ನು ಶೋಧಿಸಿಕೊಳ್ಳಲು 'ಶ್ರೀ ಪುರಂದರ ವಿಠಲ'ನ ನಾಮಸ್ಮರಣೆಯನ್ನು ಮಾಡುತ್ತಲೇ ಇರಬೇಕು. ಹೇಗೆಂದರೆ, ಜೀವನದಲ್ಲಿ ಪಾಪದ ಕೆಲಸವನ್ನು ಕಡಿಮೆ ಮಾಡಿ, ಪುಣ್ಯ ಕಾರ್ಯದಲ್ಲಿಯೇ ನಿರತನಾಗಬೇಕು. ಅಧರ್ಮದ ನಡೆಯನ್ನು ಕೈಬಿಡಬೇಕು. ನಿರ್ಮಲವಾದ ಸದಾಚಾರವನ್ನು ಮಾಡುತ್ತಿರಬೇಕು. ಪರಬ್ರಹ್ಮನ ಪಾದಕಮಲಕ್ಕೆ ಸದಾ ಶರಣು ಎನ್ನುತ್ತಿರಬೇಕು. ದೇಹವನ್ನು ದಂಡಿಸಿ, ಮನಸ್ಸಿನ ಚಂಚಲತೆಯನ್ನು ಖಂಡಿಸುತ್ತಿರಬೇಕು. ನನಗೆ ನಾನೇ ಗುರುವಾಗಿ ನೀತಿವಂತರ ಸಂಗದೊಂದಿಗೆ, ನನಗೆ 'ಪುರಂದರ ವಿಠಲನೇ' ಗತಿ ಎಂಬ ಭಾವವನ್ನು ಹೊಂದಿಸಿದಾಗ ವ್ಯಕ್ತಿಯ ಮನಸ್ಸು ಶೋಧನೆಗೆ ಒಳಗಾಗಿ ಶುದ್ಧವಾಗುತ್ತದೆ ಎಂದು ದಾಸರು ಹೇಳಿದ್ದಾರೆ. | |
| | **ವಿಭಾಗ – 'ಬಿ'** | |
| | **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 12 × 1 = 12 |
| 40. | ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳ ಸಂಖ್ಯೆ<br>(ಎ) ಎರಡು (ಬಿ) ಐದು<br>(ಸಿ) ಹದಿಮೂರು (ಡಿ) ಇಪ್ಪತ್ತನಾಲ್ಕು<br>***ಉತ್ತರ :*** (ಬಿ) ಐದು | |
| 41. | ಮಕ್ಕಳು '<u>ವಿನೋದ</u>'ದಿಂದ ಮೈದಾನದಲ್ಲಿ ಆಡುತ್ತಿದ್ದಾರೆ. ಈ ವಾಕ್ಯದಲ್ಲಿ ಅಡಿಗೆರೆ ಎಳೆದಿರುವ ಪದದ ತದ್ಭವ ರೂಪ<br>(ಎ) ಬಿನದ (ಬಿ) ವಿನುತ<br>(ಸಿ) ಆನಂದ (ಡಿ) ಬಿನೋದ<br>***ಉತ್ತರ :*** (ಎ) ಬಿನದ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 42. | ಹಣ್ಣುಗಳು ಮರದಿಂದ ನಿರಂತರವಾಗಿ ಬೀಳುತ್ತಲೇ ಇದ್ದವು. ಈ ವಾಕ್ಯದಲ್ಲಿನ ತೃತೀಯ ವಿಭಕ್ತಿ ಹೊಂದಿರುವ ಪದವಿದು<br>(ಎ) ಹಣ್ಣುಗಳು (ಬಿ) ಬೀಳುತ್ತ<br>(ಸಿ) ಮರದಿಂದ (ಡಿ) ನಿರಂತರವಾಗಿ<br>***ಉತ್ತರ :*** (ಸಿ) ಮರದಿಂದ | |
| 43. | 'ಬೆಟ್ಟದಾವರೆ' — ಪದವು ಈ ಸಂಧಿಗೆ ಉದಾಹರಣೆಯಾಗಿದೆ.<br>(ಎ) ಲೋಪ ಸಂಧಿ (ಬಿ) ಆಗಮ ಸಂಧಿ<br>(ಸಿ) ಸವರ್ಣದೀರ್ಘ ಸಂಧಿ (ಡಿ) ಆದೇಶ ಸಂಧಿ<br>***ಉತ್ತರ :*** (ಡಿ) ಆದೇಶ ಸಂಧಿ | |
| 44. | 'ಹನುಮನಂತೆ ನೀ ವಿಕಾಸಗೊಳ್ಳುವೆ' — ಈ ವಾಕ್ಯದಲ್ಲಿರುವ ಅಲಂಕಾರ<br>(ಎ) ರೂಪಕಾಲಂಕಾರ (ಬಿ) ಉಪಮಾಲಂಕಾರ<br>(ಸಿ) ಶ್ಲೇಷಾಲಂಕಾರ (ಡಿ) ಉತ್ಪ್ರೇಕ್ಷಾಲಂಕಾರ<br>***ಉತ್ತರ :*** (ಬಿ) ಉಪಮಾಲಂಕಾರ | |
| 45. | 'ಉಂಬುವ' ಈ ಪದದ ಅರ್ಥವಿದು<br>(ಎ) ಭೋಜನ (ಬಿ) ಊಟಕ್ಕೆ ಕೂರುವ<br>(ಸಿ) ಉಣ್ಣುವ (ಡಿ) ತೇಗುವ<br>***ಉತ್ತರ :*** (ಸಿ) ಉಣ್ಣುವ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 46. | "ನಿಮ್ಮ ಧಮನಿ–ಧಮನಿಗಳಲ್ಲಿ ರಕ್ತದ ಕಣಗಳಿರುವವರೆಗೂ ವೀರರಾಗಿ ಹೋರಾಡಿ." ಈ ವಾಕ್ಯದಲ್ಲಿರುವ ದ್ವಿರುಕ್ತಿ ಪದವಿದು<br>(ಎ) ಧಮನಿ–ಧಮನಿ (ಬಿ) ರಕ್ತದ ಕಣ<br>(ಸಿ) ವೀರರಾಗಿ (ಡಿ) ಹೋರಾಡಿ<br>***ಉತ್ತರ :*** (ಎ) ಧಮನಿ–ಧಮನಿ | |
| 47. | ಒಳ್ಳೆಯವರಿಗೆ ಕಾಲ ಈಗಲೂ ಚೆನ್ನಾಗಿಯೇ ಇದೆ. ಈ ವಾಕ್ಯದಲ್ಲಿರುವ ಒಳ್ಳೆಯ ಎಂಬ ಪದದ ನಾಮವಾಚಕ<br>(ಎ) ಸಂಖ್ಯಾವಾಚಕ (ಬಿ) ವಸ್ತುವಾಚಕ<br>(ಸಿ) ಗುಣವಾಚಕ (ಡಿ) ಸಂಖ್ಯೇಯ ವಾಚಕ<br>***ಉತ್ತರ :*** (ಸಿ) ಗುಣವಾಚಕ | |
| 48. | ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿರುವ ವಾಕ್ಯದ ವಿಧಾನವನ್ನು ಹೀಗೆನ್ನುತ್ತೇವೆ<br>(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ<br>(ಸಿ) ಸರಳ ವಾಕ್ಯ (ಡಿ) ಮಿಶ್ರ ವಾಕ್ಯ<br>***ಉತ್ತರ :*** (ಡಿ) ಮಿಶ್ರ ವಾಕ್ಯ | |
| 49. | ಪೂರ್ಣ ಅರ್ಥ ಕೊಡುವ ವಾಕ್ಯದ ಕೊನೆಯಲ್ಲಿ ಬಳಸುವ ಚಿಹ್ನೆ ಇದು<br>(ಎ) ಅರ್ಧವಿರಾಮ (ಬಿ) ಪೂರ್ಣವಿರಾಮ<br>(ಸಿ) ವಾಕ್ಯವೇಷ್ಟನ (ಡಿ) ವಿವರಣಾತ್ಮಕ<br>***ಉತ್ತರ :*** (ಬಿ) ಪೂರ್ಣವಿರಾಮ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 50. | ‘ಹೋಗುತ್ತಾರೆ’ ಈ ಪದದಲ್ಲಿರುವ ‘ಧಾತು’ರೂಪವಿದು<br>(ಎ) ಹೊಗು (ಬಿ) ಹೋದ<br>(ಸಿ) ಹೋಗು (ಡಿ) ಹೋಗುವ<br>***ಉತ್ತರ :*** (ಸಿ) ಹೋಗು | |
| 51. | ‘ಹೆಮ್ಮರ’ ಈ ಪದವನ್ನು ವಿಗ್ರಹವಾಕ್ಯ ಮಾಡಿ ಬರೆದಾಗ ಆಗುವ ರೂಪ<br>(ಎ) ಹಿರಿದು + ಮರ (ಬಿ) ಹಿರಿ + ಮರ<br>(ಸಿ) ಹೆಚ್ಚು + ಮರ (ಡಿ) ಹೀಗೆ + ಮರ<br>***ಉತ್ತರ :*** (ಎ) ಹಿರಿದು + ಮರ | |
| | **ವಿಭಾಗ – ‘ಸಿ’**<br>**(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)**<br>**ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :**<br>(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | $4 \times 1 = 4$ |
| | ಕನ್ನಡನಾಡಿನಲ್ಲಿ ಅನೇಕ ಅರಸು ಮನೆತನಗಳು ರಾಜ್ಯವಾಳಿ ನಾಡಿನ ಘನತೆಯನ್ನು ಗಗನದೆತ್ತರಕ್ಕೆ ಒಯ್ದು ಮುಟ್ಟಿಸಿವೆ. ಅಂತಹ ಅರಸು ಮನೆತನಗಳಲ್ಲಿ ವಿಜಯನಗರದ ಅರಸು ಮನೆತನವೂ ಒಂದು. ವಿಜಯನಗರದ ಅರಸರ ಕುಲದೇವತೆ ಭುವನೇಶ್ವರಿ. ಭುವನೇಶ್ವರಿಯೇ ಕನ್ನಡ ರಾಜ್ಯ ರಾಜೇಶ್ವರಿ, ಕನ್ನಡ ನಾಡದೇವಿ. ಈ ನಾಡದೇವಿಯನ್ನು ಪೂಜಿಸುವ ಹಬ್ಬವೇ ನಾಡಹಬ್ಬ. ಇದು ಸಕಲ ಕನ್ನಡಿಗರೂ ವಿಜೃಂಭಣೆಯಿಂದ ಆಚರಿಸುವ ಹಬ್ಬ.<br>ವಿಜಯನಗರದ ಅರಸರಂತೂ ಈ ಹಬ್ಬವನ್ನು ಎಲ್ಲಿಲ್ಲದ ಸಂಭ್ರಮ ಸಡಗರದಿಂದಲೇ ಆಚರಿಸುತ್ತಿದ್ದರು. ತಾಯಿ ಭುವನೇಶ್ವರಿಯನ್ನು ಸರ್ವ ಅಲಂಕಾರಗಳಿಂದ ಶೃಂಗರಿಸಿ ಒಂಭತ್ತು ದಿನಗಳವರೆಗೂ ಭಕ್ತಿಯಿಂದ ಆಚರಿಸುತ್ತಿದ್ದರು. ಸತತ ಒಂಭತ್ತು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ದಿನಗಳು ನಡೆಯುವ ನಾಡದೇವಿಯ ಈ ಪೂಜ್ಯೋತ್ಸವಕ್ಕೆ ನವರಾತ್ರಿ ಎಂದು ಕರೆಯುತ್ತಿದ್ದರು. ಈ ಸಂದರ್ಭದಲ್ಲಿ ಪ್ರತಿದಿನವೂ ಪುರಾಣ, ಪ್ರವಚನ, ಊಟ, ಬಡಬಗ್ಗರಿಗೆ ದಕ್ಷಿಣೆ ನೀಡುವ ಕಾರ್ಯಗಳು ನಡೆಯುತ್ತಿದ್ದವು. | |
| 52. | ಕನ್ನಡನಾಡ ದೇವಿಯ ಹೆಸರೇನು ? | |
| | ***ಉತ್ತರ :*** | |
| | ಕನ್ನಡನಾಡ ದೇವಿಯ ಹೆಸರು ಭುವನೇಶ್ವರಿ. | |
| 53. | ನಾಡಹಬ್ಬವನ್ನು ಎಷ್ಟು ದಿನಗಳವರೆಗೆ ಆಚರಿಸಲಾಗುತ್ತಿತ್ತು ? | |
| | ***ಉತ್ತರ :*** | |
| | ನಾಡಹಬ್ಬವನ್ನು ಒಂಭತ್ತು ದಿನಗಳವರೆಗೆ ಆಚರಿಸಲಾಗುತ್ತಿತ್ತು. | |
| 54. | ನಾಡಹಬ್ಬ ಎಂದು ಹೆಸರು ಬರಲು ಕಾರಣವೇನು ? | |
| | ***ಉತ್ತರ :*** | |
| | ಕನ್ನಡ ನಾಡದೇವಿಯನ್ನು ಕನ್ನಡಿಗರೆಲ್ಲರೂ ವಿಜೃಂಭಣೆಯಿಂದ, ಭಕ್ತಿ, ಸಂಭ್ರಮ, ಸಡಗರದಿಂದ ಪೂಜಿಸಿ ಹಬ್ಬದಂತೆ ಆಚರಿಸುವುದರಿಂದ 'ನಾಡಹಬ್ಬ' ಎಂದು ಹೆಸರು ಬಂದಿತು. | |
| 55. | ನಾಡಹಬ್ಬದ ಆಚರಣೆಯಲ್ಲಿ ಕೇಳಿ ಬರುವ ಪ್ರಮುಖ ಅರಸು ಮನೆತನ ಯಾವುದು ? | |
| | ***ಉತ್ತರ :*** | |
| | ನಾಡಹಬ್ಬದ ಆಚರಣೆಯಲ್ಲಿ ಕೇಳಿ ಬರುವ ಪ್ರಮುಖ ಅರಸು ಮನೆತನವೆಂದರೆ ವಿಜಯನಗರದ ಅರಸುಮನೆತನ. | |
| 56. | **ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)**<br>∗ ಶಕ್ತಿಗಿಂತ ಯುಕ್ತಿ ಮೇಲು<br>∗ ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ<br>∗ ಪಾಲಿಗೆ ಬಂದದ್ದೇ ಪಂಚಾಮೃತ | 1 × 3 = 3 |
| | ***ಉತ್ತರ :*** | |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿ / ಭಾಷಾ ಶುದ್ಧಿಗೆ | 1 ಅಂಕ |
| | ಒಟ್ಟು | 3 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 57. | **ಪತ್ರ ಲೇಖನ ಬರೆಯುವುದು :** | 1 × 4 = 4 |
| | ನಿಮ್ಮನ್ನು ಚಿಕ್ಕನಾಯಕನಹಳ್ಳಿಯ ಜನತಾ ಪ್ರೌಢಶಾಲೆಯಲ್ಲಿ ಓದುತ್ತಿರುವ 'ತುಷಾರ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸುತ್ತಿರುವ ಶಾಲಾ ವಾರ್ಷಿಕೋತ್ಸವಕ್ಕೆ ಆಹ್ವಾನಿಸಿ, ಮೈಸೂರಿನ 'ಒಂಟಿಕೊಪ್ಪಲು' ಬಡಾವಣೆಯ ನಿವಾಸಿಯಾದ ನಿಮ್ಮ ತಂದೆಯವರಿಗೆ ಒಂದು ಪತ್ರ ಬರೆಯಿರಿ. | |
| | ***ಅಥವಾ*** | |
| | ನಿಮ್ಮನ್ನು ತುಮಕೂರು ನಗರದ ಜಯನಗರ ಬಡಾವಣೆಯ ನಿವಾಸಿ 'ರಘುವೀರ' ಎಂದು ಭಾವಿಸಿಕೊಂಡು, ಬಡಾವಣೆಯಲ್ಲಿ ಸುಂದರ ಉದ್ಯಾನವನವನ್ನು ನಿರ್ಮಿಸಿಕೊಡುವಂತೆ ಕೋರಿ, ಮಹಾನಗರಪಾಲಿಕೆಯ 'ಮೇಯರ್' ಅವರಿಗೊಂದು ಮನವಿ ಪತ್ರವನ್ನು ಬರೆಯಿರಿ. | |
| | ***ಉತ್ತರ :*** | |
| | *ವೈಯಕ್ತಿಕ ಪತ್ರ :* | |
| | ಇಂದ ವಿಳಾಸ, ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗೆ ವಿಳಾಸ, ವಿನ್ಯಾಸ, ಸಹಿಯೊಂದಿಗೆ ಮುಕ್ತಾಯ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | ***ಅಥವಾ*** | |
| | *ವ್ಯಾವಹಾರಿಕ ಪತ್ರ :* | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಳ, ದಿನಾಂಕ, ವಿನ್ಯಾಸ, ಸಹಿಯೊಂದಿಗೆ ಮುಕ್ತಾಯ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 58. | **ಪ್ರಬಂಧ ಬರೆವಣಿಗೆ :** | 1 × 4 = 4 |
| | * ರಾಷ್ಟ್ರೀಯ ಭಾವೈಕ್ಯತೆಯ ಮಹತ್ವ | |
| | * ಯೋಗ ಶಿಕ್ಷಣದ ಅಗತ್ಯ | |
| | * ನನ್ನ ನೆಚ್ಚಿನ ಗುರು | |
| | ***ಉತ್ತರ :*** | |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ಜೋಡಣೆ | 1 ಅಂಕ |
| | ಮುಕ್ತಾಯ / ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |